# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

ಕೆಎಸ್‌ಕ್ಯುಎಎಸಿ, ಮಲ್ಲೇಶ್ವರಂ, ಬೆಂಗಳೂರು–560003.

# KARNATAKA SCHOOL EXAMINATION AND ASSESSMENT BOARD

KSQAAC, Malleshwaram, Bengaluru–560003.

## ಮೌಲ್ಯಾಂಕನ – ಮಾರ್ಚ್ 2023 – ಮಾದರಿ ಪ್ರಶ್ನೋತ್ತರ ಪತ್ರಿಕೆ

## Assessment - March 2023 Model Paper

**ತರಗತಿ : 5** | **ವಿಷಯ : ದ್ವಿತೀಯ ಭಾಷೆ ಕನ್ನಡ** | **ಅಂಕಗಳು : 40**
**ಸಮಯ : 2 ಗಂಟೆ**

**ವಿದ್ಯಾರ್ಥಿಗಳು ಭರ್ತಿ ಮಾಡಬೇಕಾಗಿರುವ ಮಾಹಿತಿ**

ವಿದ್ಯಾರ್ಥಿಯ ಹೆಸರು : ____________________

ವಿದ್ಯಾರ್ಥಿಯ SATS ಸಂಖ್ಯೆ : | | | | | | | | | | ವಿದ್ಯಾರ್ಥಿಯ ಸಹಿ : ____________

**ಕೊಠಡಿ ಮೇಲ್ವಿಚಾರಕರು ಭರ್ತಿ ಮಾಡಬೇಕಾಗಿರುವ ಮಾಹಿತಿ**

ಶಾಲೆಯ ಡೈಸ್ ಕೋಡ್ : | | | | | | | | | | | |

ಶಾಲೆಯ ಹೆಸರು : ____________________

ಕ್ಲಸ್ಟರ್ : ____________ ಬ್ಲಾಕ್ : ____________ ಜಿಲ್ಲೆ : ____________

ಶಾಲೆಯ ವಿಧ : ಸರ್ಕಾರಿ ☐ ಅನುದಾನಿತ ☐ ಅನುದಾನ ರಹಿತ ☐

(ಅನ್ವಯಿಸುವ ಮಾಹಿತಿಗೆ "✓" ಗುರುತು ಹಾಕಿರಿ)

ಕೊಠಡಿ ಮೇಲ್ವಿಚಾರಕರ ಸಹಿ : ____________

**ಮೌಲ್ಯಮಾಪನ ಸಮಯದಲ್ಲಿ ಶಿಕ್ಷಕರು ಭರ್ತಿ ಮಾಡಬೇಕಾದ ಮಾಹಿತಿ**

| ಪ್ರಶ್ನೆ ಸಂಖ್ಯೆ | ಪಡೆದ ಅಂಕಗಳು | ಪ್ರಶ್ನೆ ಸಂಖ್ಯೆ | ಪಡೆದ ಅಂಕಗಳು | ಪ್ರಶ್ನೆ ಸಂಖ್ಯೆ | ಪಡೆದ ಅಂಕಗಳು |
|---|---|---|---|---|---|
| 1 | | 11 | | 21 | |
| 2 | | 12 | | 22 | |
| 3 | | 13 | | 23 | |
| 4 | | 14 | | 24 | |
| 5 | | 15 | | 25 | |
| 6 | | 16 | | 26 | |
| 7 | | 17 | | 27 | |
| 8 | | 18 | | 28 | |
| 9 | | 19 | | – | |
| 10 | | 20 | | – | |
| ಒಟ್ಟು ಅಂಕಗಳು | | ಒಟ್ಟು ಅಂಕಗಳು | | ಒಟ್ಟು ಅಂಕಗಳು | |
| | | | | ಒಟ್ಟು ಗಳಿಸಿದ ಅಂಕ | |

ಒಟ್ಟು ಗಳಿಸಿದ ಅಂಕಗಳು (ಅಕ್ಷರಗಳಲ್ಲಿ) ____________________

ಮೌಲ್ಯಮಾಪಕರ ಸಹಿ : ____________

**I** **1 ರಿಂದ 20 ರವರೆಗಿನ ಪ್ರಶ್ನೆಗಳಿಗೆ ನೀಡಲಾಗಿರುವ ನಾಲ್ಕು ಆಯ್ಕೆಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ನಿಗದಿ ಪಡಿಸಿರುವ ಸ್ಥಳದಲ್ಲಿ ಕ್ರಮಾಕ್ಷರದೊಂದಿಗೆ ಉತ್ತರವನ್ನು ಬರೆಯಿರಿ.** **20x1=20**

**1. ಬಾಲಕ ನರೇಂದ್ರನ ಮೇಲೆ ಹಾವೊಂದು ಹರಿದು ಹೋದರೂ ಅವನಿಗೆ ಮೈ ಮೇಲೆ ಪರಿವೇ ಇರಲಿಲ್ಲ. ಈ ವಾಕ್ಯವನ್ನು ಓದಿದ ನಂತರ ಬಾಲಕ ಹೆದರದೇ ಕಣ್ಮುಚ್ಚಿ ಕುಳಿತು ಚಿಂತನೆ ಮಾಡಲು ಕಾರಣ.**

A) ಅವನಿಗೆ ವಿಷದ ಹಾವು ಬಂದಿಲ್ಲ ಎಂದು ತಿಳಿದಿತ್ತು.

B) ಬಾಲಕನಿಗೆ ದೀರ್ಘವಾದ ಏಕಾಗ್ರತೆ ಇದ್ದುದರಿಂದ ಹಾವು ಬಂದಿದ್ದು ತಿಳಿದಿರಲಿಲ್ಲ.

C) ಆ ಬಾಲಕನಿಗೆ ಹಾವಾಡಿಗನ ವಿದ್ಯೆ ತಿಳಿದಿತ್ತು.

D) ಆ ಹಾವಿಗೆ ಹಲ್ಲು ಕಿತ್ತು ಹಾಕಿದ್ದರಿಂದ.

ಉತ್ತರ : ☐ ____________________

**2. ಮಹಾರಾಜನು ಮುನಿಕುಮಾರನ ಬಳಿ ಓಡಿ ಬಂದು, ತಾನು ಕಾಡು ಪ್ರಾಣಿ ಎಂದು ಭಾವಿಸಿ ಬಾಣ ಬಿಟ್ಟಿದ್ದು ತಪ್ಪಾಯಿತು. ಕ್ಷಮಿಸಬೇಕೆಂದು ಗೋಗರೆದನು.**

**ಈ ವಾಕ್ಯದಲ್ಲಿ ಗೋಗರೆದ ಪದದ ಅರ್ಥ.**

A) ಕೇಡು


B) ಕೊರೆದ

C) ಗುಡಿಸಲು

D) ಬೇಡಿಕೊಳ್ಳು

ಉತ್ತರ : ☐ ____________________

**3. ಈ ಕೆಳಗಿನ ಚಿತ್ರ ಯಾವುದಕ್ಕೆ ಸಂಬಂಧಿಸಿದೆ.**



A) ಶಾಲಾ–ಕಾಲೇಜು

B) ಆಸ್ಪತ್ರೆ

C) ರೈಲ್ವೇ ನಿಲ್ದಾಣ

D) ಆಟದ ಮೈದಾನ

ಉತ್ತರ : ☐ ____________________

4. **'ದರ್ಶನ ಮಾಡಲು ಬಂದೆ' ಎನ್ನುತ್ತ ಬಡ ಮುದುಕಿ ಬಾಪುವಿನ ಪಾದಗಳನ್ನು ಮುಟ್ಟಿದಳು ಈ ವಾಕ್ಯದಲ್ಲಿರುವ ಲೇಖನ ಚಿಹ್ನೆ.**

| | |
|---|---|
| A) ಪೂರ್ಣ ವಿರಾಮ | B) ಉದ್ಧರಣ |
| C) ಅಲ್ಪ ವಿರಾಮ | D) ಪ್ರಶ್ನಾರ್ಥಕ |

ಉತ್ತರ : ☐ ____________________

5. **ನಿನ್ನ ಗೆಳೆಯ/ಗೆಳತಿಗೆ ಪತ್ರ ಬರೆಯುವಾಗ ಬಳಸುವ ಸೂಕ್ತ ಸಂಬೋಧನೆ.**

| | |
|---|---|
| A) ಮಾನ್ಯರೇ | B) ಮಾತೃಶ್ರೀ |
| C) ಪ್ರೀತಿಯ/ನಲ್ಮೆಯ | D) ಪೂಜ್ಯ ಗುರುಗಳೇ |

ಉತ್ತರ : ☐ ____________________

6. **"ಅಪಘಾತದಲ್ಲಿ ಒಂದು ಕಣ್ಣನ್ನು ಕಳೆದುಕೊಂಡ ತನ್ನ ಮಗುವಿಗೆ ತಾಯಿಯು ಕಣ್ಣು ನೀಡಲು ಮುಂದಾದಳು"**

**ಈ ವಾಕ್ಯವನ್ನು ಓದಿದ ನಂತರ ತಾಯಿಯ ಬಗ್ಗೆ ನಿನಗೆ ಮೂಡುವ ಭಾವನೆ.**

| | |
|---|---|
| A) ತ್ಯಾಗಿ | B) ಸ್ವಾರ್ಥಿ |
| C) ಆಸೆ ಬುರುಕಳು | D) ಕೋಪಿಷ್ಠೆ |

ಉತ್ತರ : ☐ ____________________

7. **"ನಾನು ಅಂಗಡಿಗೆ ಹೋಗಿ ದಿನಸಿ ಸಾಮಾನು <u>ತಂದೆ</u>" ಈ ವಾಕ್ಯದಲ್ಲಿ ಅಡಿಗೆರೆ ಎಳೆದ ಪದದ ಮತ್ತೊಂದು ಅರ್ಥ.**

| | |
|---|---|
| A) ಅಪ್ಪ | B) ತಾಯಿ |
| C) ತಾಯಿಯ ತಮ್ಮ | D) ದೊಡ್ಡಮ್ಮ |

ಉತ್ತರ : ☐ ____________________

**8. ಈ ಸೂಚನಾ ಫಲಕದ ಅರ್ಥ.**



A) ವಾಹನಗಳನ್ನು ಜೋರಾಗಿ ಓಡಿಸು

B) ಅಪಘಾತ ವಲಯ

C) ಶಾಲಾ ಮಕ್ಕಳು ಓಡಾಡುತ್ತಿರುತ್ತಾರೆ. ಆದ್ದರಿಂದ ನಿಧಾನವಾಗಿ ವಾಹನವನ್ನು ಚಾಲನೆ ಮಾಡು.

D) ನಡೆದುಕೊಂಡು ಹೋಗು

ಉತ್ತರ : ☐ ______________________________

**9. "ಮೂಡಣ ರಂಗಸ್ಥಳದಲ್ಲಿ ನೆತ್ತರು"**

**ಈ ವಾಕ್ಯದಲ್ಲಿ ಅಡಿಗೆರೆ ಎಳೆದ ಪದದ ಸಮನಾರ್ಥಕ ಪದ.**

A) ಆಕಾಶ B) ಬಣ್ಣ

C) ಪೂರ್ವ ದಿಕ್ಕು D) ರಕ್ತ

ಉತ್ತರ : ☐ ______________

**10. ಈ ಕೆಳಗಿನ ಸಾಲಿನಲ್ಲಿ ಅಡಿಗೆರೆ ಎಳೆದ ಪದವನ್ನು ಬಿಡಿಸಿ ಬರೆದಾಗ,**

**ಮೊಸರ್ಬೇಡಿ ಕೆಸರ ತುಳಿದಾನ! ಕಂದಯ್ಯ**

A) ಕೆಸರು + ಆಯ್ತು B) ಮೊಸರು + ಆಗಬೇಡಿ

C) ಮೊಸರು + ಬಿಡಿ D) ಮೊಸರು + ಬೇಡಿ

ಉತ್ತರ : ☐ ______________

**11. ಈ ಕೆಳಗಿನ ವಾಕ್ಯವನ್ನು ಓದಿ ತಾರ್ಕಿಕವಾಗಿ ಚಿಂತಿಸಿದಾಗ ಮೂಡುವ ಅರ್ಥ.**

**"ಆ ಮರದಲ್ಲಿ ಭೂತ ಇದೆ, ನೀವು ಈಗಲೇ ಜಾಗ ಬಿಟ್ಟು ಹೋಗಿ, ಇಲ್ಲದಿದ್ದರೆ ನಿಮ್ಮನ್ನೆಲ್ಲ ನುಂಗಿ ಬಿಡುತ್ತದೆ."**

A) ಮರದಲ್ಲಿ ಭೂತ ಇದೆ. B) ನಮ್ಮನ್ನೆಲ್ಲ ನುಂಗಿ ಬಿಡುತ್ತದೆ.

C) ಇಂತಹ ಭಯದ ಮಾತುಗಳನ್ನು ನಂಬಬಾರದು. D) ಆ ಸ್ಥಳಕ್ಕೆ ಹೋಗಲೇ ಬಾರದು.

ಉತ್ತರ : ☐ ______________________________

12. **ಭೀಮನಿಗೆ ಬಗೆ–ಬಗೆಯ ಭೋಜನಗಳನ್ನು ಕಂಡು ಆಸೆ ಆಯಿತು.**

**ಈ ವಾಕ್ಯದಲ್ಲಿ ಅಡಿಗೆರೆ ಎಳೆದ ಪದದ ವಿರುದ್ಧಾರ್ಥಕ ಪದ.**

A) ದುಃಖ B) ಅತಿಯಾಸೆ

C) ನಿರಾಸೆ D) ದೋಸೆ

ಉತ್ತರ : ☐ ________________

13. **ದಶರಥನು ಕಾಡಿಗೆ ಬೇಟೆಯಾಡಲು ಹೋದನು. ಈ ವಾಕ್ಯದಲ್ಲಿರುವ ಕ್ರಿಯಾಪದ ಗುರುತಿಸಿ.**

A) ದಶರಥ B) ಬೇಟೆ

C) ಕಾಡಿಗೆ D) ಹೋದನು

ಉತ್ತರ : ☐ ________________

14. **ಮಕ್ಕಳು ಸ್ಕೂಲಿನಿಂದ ಮನೆಗೆ ಹೋದರು. ಈ ವಾಕ್ಯದ ಆಡುಭಾಷೆಯ ರೂಪ.**

A) ಮಕ್ಕಳು ಸ್ಕೂಲಿನಿಂದ ಮನೆಗೆ ಹೋದರು

B) ಮಕ್ಳು ಇಸ್ಕೂಲಿಂದ ಮನಿಗೆ ಹೋದ್ರು

C) ವಿದ್ಯಾರ್ಥಿಗಳು ಇಸ್ಕೂಲಿನಿಂದ ಮನೆಗೆ ಹೋದರು

D) ಮಕ್ಕಳೆಲ್ಲರೂ ಶಾಲೆಯಿಂದ ಮನೆಗೆ ಹೋದರು

ಉತ್ತರ : ☐ ________________________________

15. **"ನರಿಯು ಎರಡು–ಮೂರು ದಿನಗಳಿಂದ ಹಸಿವು ತಡೆಯಲಾರದೇ ನರಳುತ್ತಿದೆ".**

**ಈ ವಾಕ್ಯದಲ್ಲಿರುವ ಕಾಲ ಸೂಚಿಸುವ ಪದ.**

A) ದಿನಗಳಿಂದ B) ನರಳುತ್ತಿದೆ

C) ನರಿಯು D) ತಡೆಯಲಾರದೇ

ಉತ್ತರ : ☐ ________________

16. **ಅವರೆಲ್ಲರೂ ಓಡಿ ಬಂದು ಆ ಹುಡುಗನಿಗೆ ಹಾವು ಹರಿದ ವಿಷಯ ತಿಳಿಸಿದರು.**

**ಈ ವಾಕ್ಯದಲ್ಲಿ ಅಡಿಗೆರೆ ಎಳೆದ ಪದದ ಬಹುವಚನ ರೂಪ**

A) ಹುಡುಗ B) ಹುಡುಗರು

C) ಹುಡುಗಿಯರು D) ಅವರೆಲ್ಲರೂ

ಉತ್ತರ : ☐ ______________

17. **ನಿನ್ನ ಶಾಲೆಯ ಗೋಡೆಯ ಮೇಲೆ ಧೂಮಪಾನ ನಿಷೇಧದ ಬಗ್ಗೆ ಭಿತ್ತಿ ಪತ್ರ ಅಂಟಿಸಲಾಗಿದೆ. ಇದಕ್ಕೆ ಸಂಬಂಧಿಸಿರಬಹುದಾದ ಘೋಷಣಾ ವಾಕ್ಯ.**

A) ಧೂಮಪಾನ ಆರೋಗ್ಯಕ್ಕೆ ಅಮೂಲ್ಯವಾದುದು.

B) ಧೂಮಪಾನ ಆರೋಗ್ಯಕ್ಕೆ ಹಾನಿಕಾರ.

C) ಸಾರ್ವಜನಿಕ ಸ್ಥಳದಲ್ಲಿ ಧೂಮಪಾನ ಮಾಡಲು ಅವಕಾಶವಿದೆ.

D) ಧೂಮಪಾನ ಆರೋಗ್ಯಕ್ಕೆ ಒಳ್ಳೆಯದು.

ಉತ್ತರ : ☐ ______________

18. **"ಪಾಲಿಗೆ ಬಂದಿದ್ದು ಪಂಚಾಮೃತ" – ಈ ಗಾದೆಯ ಒಳ ಅರ್ಥ**

A) ನಮಗೆ ಸಿಕ್ಕಿರುವುದೇ ಶ್ರೇಷ್ಠವಾದುದು ಎಂದು ಭಾವಿಸಿ ಸ್ವೀಕರಿಸು.

B) ಅಮೃತವನ್ನು ಸ್ವೀಕರಿಸು.

C) ಪಾಲಿಗೆ ಬಂದಿದ್ದನ್ನು ಧಿಕ್ಕರಿಸು.

D) ದೇವಸ್ಥಾನದಲ್ಲಿ ಪಂಚಾಮೃತ ಪಡೆದುಕೋ.

ಉತ್ತರ : ☐ ______________

19. **"ನೆತ್ತಿಯಲಿ ಉಂಬುವುದು – ಸುತ್ತಲೂ ಸುರಿಯುವುದು"**

**ಈ ಒಗಟಿನ ಅರ್ಥ**

A) ಬೀಸುವ ಕಲ್ಲು B) ಒನಕೆ

C) ಒಳ ಕಲ್ಲು D) ಹಸೆ ಕಲ್ಲು

ಉತ್ತರ : ☐ ______________

20. ಈ ಫಲಕವು ಸಾರುವ ಸಂದೇಶ,




A) ಕಾಡಿನ ಮಹತ್ವ

B) ಕಾಡು ಕಡಿದು – ನಾಡು ಕಟ್ಟು


C) ರಸ್ತೆಯ ಪ್ರಾಮುಖ್ಯತೆ

D) ನಾಡಿನ ಪ್ರಾಮುಖ್ಯತೆ

ಉತ್ತರ : [ ] ______________________

**II 21 ರಿಂದ 28 ರವರೆಗೆ ಪ್ರಶ್ನೆಗಳಿಗೆ ನಿಗದಿಪಡಿಸಿರುವ ಸ್ಥಳದಲ್ಲಿ ಉತ್ತರಿಸುವುದು.**

21. ಈ ಚಿತ್ರವನ್ನು ಗಮನಿಸಿದ ನಂತರ ಮೊಬೈಲ್ ವ್ಯಸನದ ಬಗ್ಗೆ ಕನಿಷ್ಟ ಮೂರು ಸಾಲುಗಳನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ. **2 ಅಂಕ**



______________________________________________

______________________________________________

______________________________________________

22. ಏರುವವನು ರವಿ ಏರುವನು

ಬಾನೊಳು ಸಣ್ಣಗೆ ತೋರುವನು

ಏರಿದವನು ಚಿಕ್ಕವನಿರಬೇಕಲೆ

ಎಂಬಾ ಮಾತನು ಸಾರುವನು

ಈ ಮೇಲಿನ ಪದ್ಯದ ಅರ್ಥವನ್ನು ನಿಮ್ಮ ಮಾತುಗಳಲ್ಲಿ ಕನಿಷ್ಟ ಮೂರು ಸಾಲಿನಲ್ಲಿ ವಿವರಿಸಿ. **2 ಅಂಕ**

23. ನಿನಗೆ ತಿಳಿದಿರುವ ಅಥವಾ ಓದಿರುವ 2 ಪುಸ್ತಕಗಳನ್ನು ಹೆಸರಿಸು. **2 ಅಂಕ**

24. ಈ ಚಿತ್ರದಲ್ಲಿ ಕಾಣುವ ಘಟನೆಯನ್ನು ಗ್ರಹಿಸಿ ಎರಡು–ಮೂರು ವಾಕ್ಯಗಳಲ್ಲಿ ವಿವರಿಸು. **2 ಅಂಕ**



**25.** **ನಿನ್ನ ಶಾಲೆಯಲ್ಲಿ ಆಚರಿಸಿದ 'ಗಣರಾಜ್ಯೋತ್ಸವ'ದ ಕುರಿತು ನಿಮ್ಮ ಮಾತುಗಳಲ್ಲಿ ಕನಿಷ್ಠ ಮೂರು ಸಾಲಿನಲ್ಲಿ ಬರೆಯಿರಿ.** **2 ಅಂಕ**

**26.** **ಈ ಕೆಳಗಿನ ಪದ್ಯ ಭಾಗವನ್ನು ಓದಿ, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.** **3 ಅಂಕ**

ಹಾವಿನ ಹೆಡೆ ಚೆಂದ ಮಾವಿನ ಮಿಡಿ ಚೆಂದ
ಹಾರಾಡಿ ಬರುವ ಗಿಳಿ ಚೆಂದ! ಕಂದಯ್ಯ
ನೀ ಚೆಂದ ನಮ್ಮ ಮನಿಗೆಲ್ಲ

**a)** **ಮಗುವಿನ ಚೆಂದವನ್ನು ಜನಪದರು ಯಾವುದಕ್ಕೆ ಹೋಲಿಸಿದ್ದಾರೆ.**

**b)** **ಮನೆಗೆಲ್ಲ ಕಂದಯ್ಯ ಚಂದ ಎಂದು ಹೇಳಲು ಕಾರಣವೇನು?**

27. ಶೈಕ್ಷಣಿಕ ಪ್ರವಾಸಕ್ಕೆ ಹೋಗಲು ತಂದೆಯ ಅನುಮತಿ ಕೋರಿ ಪತ್ರ ಬರೆ. **3 ಅಂಕ**

28. A) ಈ ಸೂಚನಾ ಫಲಕವು ಯಾವುದಕ್ಕೆ ಸಂಬಂಧಿಸಿದೆ?

ಇದನ್ನು ಗಮನಿಸದೇ ಹೋದರೆ ಆಗುವ ಅನಾಹುತಗಳೇನು? **2 ಅಂಕ**



______________________________________________

______________________________________________

______________________________________________

______________________________________________

B) ಈ ಸೂಚನಾ ಫಲಕವನ್ನು ಏಕೆ ಹಾಕಲಾಗಿದೆ ? **2 ಅಂಕ**



______________________________________________

______________________________________________

______________________________________________

______________________________________________